(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಂಡರ್‌ಗ್ರೌಂಡ್ ಕೇಬಲ್ ಹಾಕಿಸಲಿಕ್ಕೆ ನೀವು ಮತ್ತು ಕೆ.ಇ.ಬಿ ಯವರು ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಎಲ್ಲರೂ ಒಂದೇ ಸರ್, ನಾನು ಎಲ್ಲರೂ ಮಾತನಾಡುವುದನ್ನು ಕೇಳಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಇಲ್ಲ ಆಯಿತು, ನಿಮ್ಮ ಪ್ರಶ್ನೆ ಮುಗಿಯಿತು. ಕುಳಿತುಕೊಳ್ಳಿ. ಯೋಗೀಶ್ ಭಟ್ ರವರೆ ತಾವು ಕೇಳಿ.

ಮಾನ್ಯ ಸದಸ್ಯರೊಬ್ಬರು : ಮಾನ್ಯ ಅಧ್ಯಕ್ಷರೆ, ಅರಣ್ಯದ ಬಗ್ಗೆ ಒಂದು ಸ್ವಲ್ಪ ...

ಅಧ್ಯಕ್ಷರು : ಇಲ್ಲ ದಯಮಾಡಿ ಕುಳಿತುಕೊಳ್ಳಿ, ಮತ್ತೆ, ಮತ್ತೆ ಕೇಳುವುದಕ್ಕೆ ಅವಕಾಶ ಇಲ್ಲ. ಇದೇನು ನೀವು ಚರ್ಚಾ ಅವಧಿ ಎಂದು ತಿಳಿದುಕೊಂಡಿದ್ದೀರೇನು ? ನೋಡಿ ಸಾಕಷ್ಟು ಜನರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಇದು ಅತಿಯಾಯಿತು. ಇಲ್ಲ, ಯೋಗೀಶ್ ಭಟ್ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಲೈನ್ ಎಳೆಯುವುದಕ್ಕೆ ತೊಂದರೆ ಮಾಡುವುದಿಲ್ಲವೆಂದು ಹೇಳುತ್ತಿದ್ದೇನೆ. ಇನ್ನೇನು ಹೇಳಬೇಕು? ಲೈನ್‌ಗೆ ತೊಂದರೆ ಮಾಡುವುದಿಲ್ಲ, ಆದರೆ ಮರಗಳನ್ನು ಕಡಿಯಬಾರದು, ಕೊಂಬೆ ಕಡಿದು ಎಳೆಯಲಿ ಎಂದು ಸೂಚನೆಯನ್ನು ಹೇಳುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು : ಈಗ ಯೋಗೀಶ್ ಭಟ್‌ರವರೆ ಮಾತನಾಡಿ.

ವಿಷಯ : ಮಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸುತ್ತಿದೆ. ನೇತ್ರಾವತಿ ನದಿಯಲ್ಲಿರುವಂತಹ ನೀರಿನ ಒಳಹರಿವು ನಿಂತಿದೆ. ಇವತ್ತು ಸ್ಟೋರೇಜ್, ಟ್ಯಾಂಕ್‌ನಲ್ಲಿ ಒಂದೊಂದು ಇಂಚು ದಿವಸಕ್ಕೆ ಕಡಿಮೆಯಾಗುತ್ತಿದೆ. ಆ ಕಡೆಯಲ್ಲಿ ಇರುವಂತಹ ವೆಂಟೆಡ್ ಡ್ಯಾಂನಲ್ಲಿ ನೀರು ಲೀಕೇಜ್ ಆಗುತ್ತಿದೆ. ಇದೇ ರೀತಿಯಾದರೆ ಮುಂದಿನ ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ಏನು ಗತಿ ? ಇಡೀ ಜನತೆ ಕುಡಿಯುವ ನೀರಿಗೋಸ್ಕರ ನೇತ್ರಾವತಿ ನದಿಯ ಮೂಲದಲ್ಲಿ ಸ್ಟೋರೇಜ್ ವ್ಯವಸ್ಥೆ ಏನಿದೆ ನೀರು ಪಂಪ್ ಆಗುವಂತಹ ಆಧಾರದಲ್ಲಿ ಇವತ್ತು ಜೀವನವನ್ನು ನಡೆಸಬೇಕಾಗಿದೆ. ಬೇರೆ ಯಾವುದೆ ಆಲ್ಟರ್ನೇಟೀವ್ ವ್ಯವಸ್ಥೆ ಇಲ್ಲ. ಇದ್ದಂತಹ ಬಾವಿಗಳೆಲ್ಲಾ ಹಾಳಾಗಿ ಹೋಗಿದೆ. ಇಂತಹ ಒಂದು ಅನಿವಾರ್ಯದ ಪರಿಸ್ಥಿತಿಯಲ್ಲಿ ಸರ್ಕಾರ ಸಮಲೋಪಾಧಿಯಲ್ಲಿ ವೆಂಟೆಡ್ ಡ್ಯಾಂ ಅನ್ನು ದುರಸ್ತಿ ಮಾಡುವಂತಹ ಕಾರ್ಯವನ್ನು ಮಾಡಬೇಕಾಗಿತ್ತು. ಇವತ್ತಿನ ತನಕ ಅದರ ಬಗ್ಗೆ ಏನೇನು ಕಾಳಜಿ ವಹಿಸಿಲ್ಲ ಅಧ್ಯಕ್ಷರೆ. ಇದರ ಬಗ್ಗೆ ತುರ್ತು ಗಮನ ಹರಿಸಿ ಆ ವೆಂಟೆಡ್ ಡ್ಯಾಂ ನಲ್ಲಿ ಎಷ್ಟು ನೀರು ಲೀಕೇಜ್ ಆಗುತ್ತಿದೆ ಅದನ್ನು ತಕ್ಷಣ ಪ್ಯಾಚ್‌ವರ್ಕ್ ಮಾಡುವುದಕ್ಕೆ, ಅದಕ್ಕೆ ಸಂಬಂಧಪಟ್ಟ ಸಿಮೆಂಟ್ ಪ್ಲಾಸ್ಟಿಂಗ್ ಅಥವಾ ಬೇರೆ ಇನ್ನಿತರ ಕಾಮಗಾರಿಗಳನ್ನು ತೆಗೆದುಕೊಳ್ಳದೆ ಇದ್ದರೆ ಖಂಡಿತವಾಗಿ ನಾವು ಏಪ್ರಿಲ್ ಮೇ ನಲ್ಲಿ ಸಮಸ್ಯೆಯನ್ನು ಹೇಗೆ ಎದುರಿಸಬೇಕು ಎನ್ನುವ ಹೆದರಿಕೆಯಲ್ಲಿ ನಾವಿದ್ದೇವೆ. ಮಹಾನಗರ ಪಾಲಿಕೆಯಲ್ಲಿ ನಿರ್ಣಯದ ಮೇಲೆ ನಿರ್ಣಯ ಆಯಿತು, ಎಲ್ಲಾ ಸಂಗತಿಗಳು ಆಯಿತು. ನಾವು ಇಲ್ಲಿ ಇಷ್ಟೆ ಒತ್ತಾಯ ಮಾಡುತ್ತಿರುವುದು, ಈ ಸಂದರ್ಭದಲ್ಲಿ ಒಂದು ಕಡೆ ಲೀಕೇಜ್ ಆಗುತ್ತಿದೆ. ಇನ್ನೊಂದು ಕಡೆಯಲ್ಲಿ ಎಲ್ಲಿ ಸರಬರಾಜು ಆಗುವಂತಹ ವ್ಯವಸ್ಥೆ ಇದೆ, ಅಲ್ಲಿ ಪಂಪಿಂಗ್ ಸಂಬಂಧಪಟ್ಟಂತೆ ವಿದ್ಯುತ್ ಸರಬರಾಜು ಕೂಡ ಕೈ ಕೊಡುತ್ತಿದೆ.

ಅಧ್ಯಕ್ಷರು : ಆಯಿತು, ಎಷ್ಟೊತ್ತು ಹೇಳುತ್ತೀರಿ.

ಶ್ರೀ ಎನ್. ಯೋಗೀಶ್ ಭಟ್ : ನಾನು ಇಷ್ಟೆ ತಮ್ಮ ಮೂಲಕ ವಿನಂತಿ ಮಾಡುವುದು, ಅದಕ್ಕೆ ತಕ್ಷಣ ಕಾಮಗಾರಿಗಳನ್ನು ತೆಗೆದುಕೊಳ್ಳಿ. ಎಂದಿಗೂ ಶಾಶ್ವತವಾಗಿ ಇರುವಂತಾದ್ದು ಕುಡಿಯುವ ನೀರಿನ ವ್ಯವಸ್ಥೆ ಅದಕ್ಕೋಸ್ಕರ ಹತ್ತಿರದಲ್ಲಿ ಹೋಸ ವೆಂಟೆಡ್ ಡ್ಯಾಂ ಅನ್ನು ಕೊಡಬೇಕು ಎಂದು ಬೇಡಿಕೆ ಇದೆ ನಮ್ಮದು. ಆ ಹೊಸ ವೆಂಟೆಡ್ ಡ್ಯಾಂ

ಬೇಡಿಕೆಗೆ ಸಂಬಂಧಪಟ್ಟಂತೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಎಲ್ಲರನ್ನು ಭೇಟಿಯಾಗಿಯಾಯಿತು. ಭೇಟಿಯಾದಾಗ 20 ಕೋಟಿ ಅಲ್ಲ 50 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿ, ಆದರೆ ಬಜೆಟ್‌ನಲ್ಲಿ ಒಂದು ನಯಾಪೈಸೆ ಕೂಡ ಇಟ್ಟಿಲ್ಲ. ಈಗ ನಾನು ತಮ್ಮ ಮೂಲಕ ಬೇಡಿಕೆ ಮಾಡಿಕೊಳ್ಳುವುದೇನೆಂದರೆ ಯಾವುದೆ ರೀತಿಯಲ್ಲಿ ಕೆಎಸ್‌ಐಎಫ್‌ಡಿಸಿ ಸಾಲದ ಮೂಲಕ ಇರಲಿ ಅಥವಾ ಯಾವುದೆ ಸಂಪನ್ಮೂಲಗಳನ್ನು ಜೋಡಿಸಿ ನಮಗೆ ಕುಡಿಯುವ ನೀರಿಗೆ ತೊಂದರೆ ಆಗದ ರೀತಿಯಲ್ಲಿ ಹೊಸ ವೆಂಟೆಡ್ ಡ್ಯಾಂ ಅನ್ನು ವ್ಯವಸ್ಥೆ ಮಾಡಿ ಹಾಗೂ ಈಗ ಇರುವಂತಹ ವೆಂಟೆಡ್ ಡ್ಯಾಂ ಅನ್ನು ರಿಪೇರಿ ಮಾಡಿಸಿ.

ಅಧ್ಯಕ್ಷರು : ಯೋಗೀಶ್ ಭಟ್ ರವರೆ ನಿಮ್ಮಂತಹ ಹಿರಿಯ ಸದಸ್ಯರೆ ಈ ರೀತಿ 5 ರಿಂದ 10 ನಿಮಿಷ ಇಲ್ಲಿ ಚರ್ಚೆ ಮಾಡುತ್ತಾ, ಮಾತನಾಡುತ್ತಾ ನಿಂತರೆ, ಏನು ಶೂನ್ಯವೇಳೆ ಇದು. ಹೊಸಬರಿಗೆ ಏನು ಅವಕಾಶ ಕೊಡುವುದು ? ಇನ್ನು ನಾನು ಶೂನ್ಯವೇಳೆಯಲ್ಲಿ ಹಿರಿಯ ಸದಸ್ಯರಿಗೆ ಯಾರಿಗೂ ಅವಕಾಶ ಕೊಡುವುದಿಲ್ಲ. ಹೊಸಬರಾದರೆ ಎರಡು ನಿಮಿಷದಲ್ಲಿ ಕೇಳುತ್ತಾರೆ, ನೀವೆಲ್ಲಾ ಐದ್ಯೆದು ನಿಮಿಷ ಹತ್ತತ್ತು ನಿಮಿಷ ತೆಗೆದುಕೊಳ್ಳುತ್ತೀರಿ. ಇಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಕಳೆದು ಮೂರು ದಿವಸಗಳಿಂದ ನಾನು ಕೇಳುತ್ತಿದ್ದೇನೆ, ಇಷ್ಟು ಗಂಭೀರವಾದಂತಹ ಪರಿಸ್ಥಿತಿ ಇರುವುದರಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ನಾವು ಕೇವಲ ಭಾಷಣಕೋಸ್ಕರ ಭಾಷಣ ಮಾಡುತ್ತಿಲ್ಲ ಇಲ್ಲಿ. ಸಮಸ್ಯೆಯ ಗಂಭೀರತೆಯಿಂದ ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಒಂದು ಕಾಳಜಿ ಇದ್ದರೆ ತಕ್ಷಣ ಸ್ಪಂದಿಸಿ ಹೊಣೆಗಾರಿಕೆಯಿಂದ ವರ್ತಿಸಿ ಎಂದು ಮಾತ್ರ ನಾನು ಈ ಸಂದರ್ಭದಲ್ಲಿ ಆಗ್ರಹ ಮಾಡುತ್ತಿದ್ದೇನೆ.

ಅಧ್ಯಕ್ಷರು : ಯಾರಾದರೂ ಒಬ್ಬರು ಮಂತ್ರಿಗಳು ಇದಕ್ಕೆ ಉತ್ತರ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನೇ ಹೇಳುತ್ತೇನೆ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಂದಮೇಲೆ ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಹಾಗೂ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ಅವರ ಕಡೆಯಿಂದ ಹೇಳಿಸುತ್ತೇನೆ. ನೀರಿನ ವಿಚಾರದಲ್ಲಿ ಸರ್ಕಾರದ ಕಡೆಯಿಂದ ಜವಾಬ್ದಾರಿ ಇದೆ, ಅದನ್ನು ಮಾಡಿಸುತ್ತೇನೆ.

ಅಧ್ಯಕ್ಷರು : ಚಿಕ್ಕನಗೌಡರು..... ಈಗ ಶೂನ್ಯವೇಳೆಯಲ್ಲಿ ಏನೋ ಹೇಳುತ್ತಾರೆ, ಆಯಿತು ಬಿಡಿ.

ಒಬ್ಬರು ಮಾನ್ಯ ಸದಸ್ಯರು : ನನ್ನನ್ನು ಮೂರು ಬಾರಿ ಕರೆದಿದ್ದೀರಿ ಸಾರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಇಷ್ಟೊಂದು ಸಹಕಾರವನ್ನು ಹೊಸ ಸದಸ್ಯರಿಗೆ ಕೊಡುತ್ತಿದ್ದೀರಿ. ಅದಕ್ಕೆ ತಮಗೆ ಯಾವರೀತಿ ಕೃತಜ್ಞತೆ ಸಲ್ಲಿಸಬೇಕೋ ಗೊತ್ತಾಗುತ್ತಿಲ್ಲ. ಆದರೆ ದುಃಖ ಏನು ಗೊತ್ತಾ ಸರ್, ಇಷ್ಟು ಜ್ವಲಂತ ಸಮಸ್ಯೆ ಇದ್ದಾಗ ಕಾಡಿ ಬೇಡಿ ನೀವು ಅನುಮತಿ ಕೊಟ್ಟು ಅದರ ಬಗ್ಗೆ ಒಂದೆರಡು ನಿಮಿಷ ಮಾತನಾಡಿದಾಗ, ಫ್ರೆಂಟ್ ಲೈನ್‌ನಲ್ಲಿ ಜವಾಬ್ದಾರಿ ಇರುವಂತಹ ಯಾರಾದರೂ ಸಚಿವರು ಕುಳಿತುಕೊಳ್ಳಬೇಕು ಅಧಿವೇಶನ ಮುಗಿಯುವರೆಗೂ. ಈಗ ಸಿ.ಎಂ. ಎಲ್ಲೋ ಹೋಗಿದ್ದಾರೆ. ಆದರೆ ದುಃಖ ಏನೆಂದರೆ ಇಷ್ಟು ಜ್ವಲಂತ ಸಮಸ್ಯೆ ಇರುವಾಗ, ನಿಮ್ಮನ್ನು ಕಾಡಿ ಬೇಡಿ ಸಮಸ್ಯೆಯ ಬಗ್ಗೆ 2 ನಿಮಿಷಗಳು ಸದಸ್ಯರು ಮಾತನಾಡಿದಾಗ, ಮುಂದಿನ ಸಾಲಿನಲ್ಲಿ ಯಾರಾದರೂ ಒಬ್ಬಬ್ಬರು ಜವಾಬ್ದಾರಿ ಇರುವಂತಹ ಸಚಿವರು ಅಧಿವೇಶನ ಮುಗಿಯುವವರೆಗೂ ಕುಳಿತುಕೊಳ್ಳಬೇಕು. ಈಗ ಮಾನ್ಯ ಮುಖ್ಯ ಮಂತ್ರಿಯವರು ಎಲ್ಲಿಗೊ ಹೋಗಿದ್ದಾರೆ, ಇನ್ನು ಉಪ ಮುಖ್ಯಮಂತ್ರಿಯವರು ಇಷ್ಟು ಹೊತ್ತು ಸಭೆಯಲ್ಲಿ ಇದ್ದರು. ಈಗ ಎಲ್ಲಿಗೊ ಹೋದರು. ಇನ್ನು ಯಾರಾದರೂ ಹಿರಿಯ ಸಚಿವರು, ನಾನು ಇಲ್ಲಿ ಇರುವಂತಹ ಸಚಿವರ ಬಗ್ಗೆ ಏನು ಮಾತನಾಡುತ್ತಿಲ್ಲ. ನಾನು ಇಲ್ಲಿ ಮುಂದಿನ ಸಾಲಿನಲ್ಲಿ ಒಂದಿಬ್ಬರು ಇದ್ದರೆ, ಅದಕ್ಕೆ ಒಂದು ಜವಾಬ್ದಾರಿಯೂ ಇರುತ್ತದೆ. ಇಲ್ಲಿ ಅಧಿಕಾರಿಗಳು ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುತ್ತಾರೆ. ಆ ಪರ್ಪಸ್ ಸರ್ವ್ ಆಗುತ್ತದೆ. ಈಗ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಕಾಡಿನ ವಿಚಾರವಾಗಿ ಹೇಳಿದರು. ಅವರ ಬಗ್ಗೆ ನಾನು ಏನು ಹೇಳಲಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಇವರು ಏಕೆ ಇಷ್ಟು ಹಗುರವಾಗಿ ಈ ಅಧಿವೇಶನವನ್ನು ತೆಗೆದುಕೊಂಡಿದ್ದಾರೆ ? ಇವರಿಗೆ ಏನಾಗಿದೆ ? ನಾವು ಕೊಡುತ್ತಿರುವಂತಹ ಕೋ ಆಪರೇಷನ್ ಅನ್ನು ಇವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಬೇಕಾದರೆ ಸಭೆಯನ್ನು ಮುಂದಕ್ಕೆ ಹಾಕಿ, ನಮ್ಮದು ಏನು ಅಭ್ಯಂತರವಿಲ್ಲ. ಇದು ಏನು ಬೆಜವಾಬ್ದಾರಿ, ಸರ್ಕಾರದ

ಹಿರಿಯ ಸಚಿವರುಗಳ ಬಹಳ ಬೇಜವಾಬ್ದಾರಿಯಾಗಿದೆ, ಇದು ಒಳ್ಳೆಯದಲ್ಲ. ತಾವು ಸಭೆಯನ್ನು ಮುಂದಕ್ಕೆ ಹಾಕಿ, ಬೇಕಾಗಿಲ್ಲ.

ಅಧ್ಯಕ್ಷರು : ಆಯಿತು, ಈಗ ಹೊಸ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರ ಗೌಡರೆ ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಹಿರಿಯ ಸಚಿವನಾಗಿದ್ದೇನೆ, ನನಗೂ ವಯಸ್ಸು ಆಗಿದೆ. ನಾನು ಸಣ್ಣವನಲ್ಲ, ನಾನು ತಿಳಿದವನಾಗಿದ್ದೇನೆ.

ಅಧ್ಯಕ್ಷರು : ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡರೇ, ಮಾತನಾಡಿ.

ವಿಷಯ : ಕಲಘಟಗಿ ತಾಲ್ಲೂಕಿನ ಬೇಗೂರು ಗ್ರಾಮದಲ್ಲಿ ಬೆಳೆ ವಿಮೆಯ ಬಗ್ಗೆ ಆಗಿರುವ ಅವ್ಯವಹಾರ ಮತ್ತು ಪೋಲಿಸರಿಂದ ಚಿತ್ರಹಂಸೆ.

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ ತಾಲ್ಲೂಕು) : ಮಾನ್ಯ ಅಧ್ಯಕ್ಷರೇ, ಕಳೆದು ಒಂದು ವರ್ಷದಿಂದ ಕಲಘಟಗಿ ತಾಲ್ಲೂಕ್‌ನ ಬೇಗೂರು ಗ್ರಾಮದಲ್ಲಿ ಬೆಳೆವಿಮೆಯು ಬಗ್ಗೆ ಅಲ್ಲಿರುವಂತಹ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯವರು 8 ಲಕ್ಷ ರೂಪಾಯಿಗಳ ಅವ್ಯವಹಾರವನ್ನು ಮಾಡಿದರು. ಇಲ್ಲಿ ಸರ್ಕಾರ ಬೆಳೆವಿಮೆಗೆ ಎಂದು ಏನು ಕೊಟ್ಟಿದ್ದರು. ಅದನ್ನು ತಿದ್ದುಪಡಿ ಮಾಡಿ, ಆ ರೈತರಿಗೆ ಹಣವನ್ನು ವಿತರಣೆ ಮಾಡುವಂತಹ ಸಂದರ್ಭದಲ್ಲಿ, ಅಲ್ಲಿ ಗದ್ದಲವಾಯಿತು. ಈ ಗದ್ದಲವಾಗುವಂತಹ ಸಂದರ್ಭದಲ್ಲಿ, ಆ ಕಾರ್ಯದರ್ಶಿಯವರನ್ನು ಮತ್ತು ಆ ಗ್ರಾಮದ ಹಿರಿಯರನ್ನು ಒಂದು ಕಡೆ ಕರೆಸಿ ಚರ್ಚೆಯನ್ನು ಮಾಡಿದೆ. ಅವರೊಡನೆ ಚರ್ಚೆ ಮಾಡಿ, ಆ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡಬೇಡಿ, ಎಂದು ನಾನು ಅವರಿಗೆ ತಿಳಿಸಿ, ಇದಕ್ಕೆ ಸಂಬಂಧಪಟ್ಟವರೊಡನೆ ಕರೆಸಿ ಮಾತನಾಡುತ್ತೇನೆಂಬ ವಿಚಾರವನ್ನು ಅವರಿಗೆ ಹೇಳಿದೆ. ಆದರೆ ಆ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯವರು, ಅಲ್ಲಿರುವಂತಹ ಸೊಸೈಟಿಯಲ್ಲಿ ಇರುವಂತಹ ಖಾಲಿ ಚೀಲಗಳಲ್ಲಿ ಸಂಬಂಧಪಟ್ಟಂತಹ ಕಾಗದ ಪತ್ರಗಳನ್ನು ಕಟ್ಟಿ, ಅದಕ್ಕೆ ಬೆಂಕಿ ಹಚ್ಚಿ ದೊಡ್ಡ ಅನಾಹುತವನ್ನು ಮಾಡಿದರು. ಈ ರೀತಿ ದೊಡ್ಡ ಅನಾಹುತವನ್ನು ಮಾಡಿದಾಗ ಅವರೇ ಹೋಗಿ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟರು. ಈ ಕಂಪ್ಲೇಂಟ್ ಕೊಟ್ಟಾಗ ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಗಳೇ ಬಂದರು. ಆ